# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ

ನಂ:ಕವಿಪತ್ತು ನಿರ್ವಹಣೆ:ಕೋವಿಡ್-19:ಸಿಆರ್:01/20-21 ದಿನಾಂಕ:01/04/2020

## ಪತ್ರಿಕಾ ಪ್ರಕಟಣೆ

ಕೋವಿಡ್-19 ಸಾಂಕ್ರಾಮಿಕ ರೋಗ ತಡೆಗಾಗಿ ಲಾಕ್‌ಡೌನ್ ಘೋಷಣೆ ಮಾಡಿರುವುದರಿಂದ ಅಗತ್ಯ ಸೇವೆಗಳನ್ನು ಹೊರತುಪಡಿಸಿ ಇತರೆ ಎಲ್ಲಾ ಸೇವೆಗಳನ್ನು ನಿರ್ಬಂಧಿಸಲಾಗಿರುತ್ತದೆ. ಆದರೆ ವಲಸೆ ಕಾರ್ಮಿಕರು, ನಿರ್ಗತಿಕರು ಮತ್ತು ಅಲೆಮಾರಿ ಇನ್ನಿತರೆ ವರ್ಗದವರಿಗೆ ದಿನನಿತ್ಯದ ಜೀವನ ನಿರ್ವಹಣೆಗಾಗಿ ಜಿಲ್ಲಾಡಳಿತದಿಂದ ವಿವಿಧ ನೋಡಲ್ ತಂಡಗಳನ್ನು ಮಾಡಿ, ಅವರ ಮೂಲಕ ಅವಶ್ಯಕ ವಸ್ತುಗಳನ್ನು ಪೂರೈಕೆ ಮಾಡಲಾಗುತ್ತಿರುತ್ತದೆ. ಆದಾಗ್ಯೂ ಸ್ವಯಂ ಸೇವಕ ಸಂಘಗಳು, ದಾನಿಗಳು ಪ್ರತ್ಯೇಕವಾಗಿ ಆಹಾರ ಸಾಮಗ್ರಿ/ಸಿದ್ದ ಆಹಾರ ಮುಂತಾದ ನಿತ್ಯೋಪಯೋಗಿ ವಸ್ತುಗಳನ್ನು ವಿತರಣೆ ಮಾಡಲು ಇಚ್ಚಿಸಿದಲ್ಲಿ ಸಾರ್ವಜನಿಕರಿಗೆ ನೇರವಾಗಿ ವಿತರಣೆ ಮಾಡದೇ ಕಡ್ಡಾಯವಾಗಿ ಜಿಲ್ಲಾಡಳಿತದ ಮೂಲಕ ನೇಮಿಸಲಾಗಿರುವ ತಂಡಗಳಿಗೆ ತಲುಪಿಸುವುದು. ಇದರಿಂದ ಅನಗತ್ಯವಾಗಿ ಜನರು ಗುಂಪು ಸೇರುವುದು, ಮನೆಯಿಂದ ಹೊರಬರುವುದನ್ನು ತಡೆಯಬಹುದಾಗಿರುತ್ತದೆ ಹಾಗೂ ಅಗತ್ಯವಿರುವವರಿಗೆ ಸೇವೆಯನ್ನು ಒದಗಿಸಿದಂತಾಗುತ್ತದೆ. ಆಸಕ್ತರು ಕೆಳಕಂಡ ನೋಡಲ್ ಅಧಿಕಾರಿಗಳನ್ನು ಸಂಪರ್ಕಿಸಲು ಕೋರಿದೆ.

| | |
|---|---|
| ಚಿತ್ರದುರ್ಗ ನಗರ ಮತ್ತು ತಾಲ್ಲೂಕು ವ್ಯಾಪ್ತಿ | 1. ಕೆ.ಪಿ. ಮಧುಸೂಧನ್, ಉಪನಿರ್ದೇಶಕರು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ (9448233477)<br>2. ರಾಘವೇಂದ್ರರಾವ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು (9620089272)<br>3. ಅವಿನ್ ರಾಮಚಂದ್ರ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು. (9886907455) |
| ಜಿಲ್ಲೆಯ ಇತರೆ ತಾಲ್ಲೂಕುಗಳು | ಸಂಬಂಧಪಟ್ಟ ತಹಶೀಲ್ದಾರರನ್ನು ಸಂಪರ್ಕಿಸುವುದು<br>ತಹಶೀಲ್ದಾರ್ ಚಳ್ಳಕೆರೆ – 9606558647<br>ತಹಶೀಲ್ದಾರ್ ಹಿರಿಯೂರು – 9008305426<br>ತಹಶೀಲ್ದಾರ್ ಮೊಳಕಾಲ್ಮುರು – 9448556100<br>ತಹಶೀಲ್ದಾರ್ ಹೊಸದುರ್ಗ – 9148824641<br>ತಹಶೀಲ್ದಾರ್ ಹೊಳಲ್ಕೆರೆ – 8660519889 |

(ಆರ್.ವಿನೋತ್ ಪ್ರಿಯಾ) 1/4/20

ಜಿಲ್ಲಾಧಿಕಾರಿಗಳು,

ಚಿತ್ರದುರ್ಗ ಜಿಲ್ಲೆ.